

ಆಸೆಯ ಭೂತ ಇವಳ ಮೈಯಲ್ಲಿ ಹೊಕ್ಕು ಹುಚ್ಚಯ್ಯನ ಥರದ ಲಂಪಟ ಮನುಷ್ಯನ ಭವಿಷ್ಯವಾಣಿಯಲ್ಲೂ ಅವಳಿಗೆ ಒಳ್ಳೆಯದೇ ಕಾಣಿಸುತ್ತದೆ, ನಂಬುವಂತೆ ಮಾಡಿಸುತ್ತದೆ. ಆ ಹುಚ್ಚಯ್ಯ ಅಕಸ್ಮಾತ್ತಾಗಿ ಸತ್ತಾಗ, ಮನೆಯ ಆಳು, ಸಮಯಸಾಧಕ ಮರ್ಯಾನಿಗೆ ಇವಳನ್ನು ಉಪಯೋಗಿಸಿಕೊಳ್ಳುವ ಅವಕಾಶವೊಂದು ಸೃಷ್ಟಿಯಾಗುತ್ತದೆ. ಅವನೋ, ಅವಳನ್ನು ಬಯಸಿ ಬೆನ್ನು ಬಿದ್ದ ನಕ್ಷತ್ರಿಕ. ಗೌಡ ಅವನಿಗೆ ಮಾಡಿದ ಅನ್ಯಾಯಕ್ಕೆ ಪ್ರತಿಯಾಗಿ ಸಿಂಗಾರೆವ್ವನ ಮೇಲೆ ಸೇಡು. ಹಾಗೆ ನೋಡಿದರೆ ಅವಳ ಬದುಕಲ್ಲಿ ಬಂದು ಹೋಗುವ ಗಂಡಸರೆಲ್ಲರದ್ದೂ ಒಂದಿಲ್ಲೊಂದು ಬಗೆಯ ಕ್ರೌರ್ಯ. ಅವಳ ಮೇಲೆ ಕಣ್ಣು ಹಾಕಿ ಹಾಳು ಮಾಡಲು ನೋಡುವ ಹುಚ್ಚಯ್ಯ, ದೇಸಾಯಿಯ ಆಸ್ತಿ ಹೊಡೆಯಲು ತಂತ್ರ ಹೂಡುವ ಪರಮಶೆಟ್ಟಿಗಳ ಪಾತ್ರವೇನೂ ಕಡಿಮೆಯಲ್ಲ.

ಕಥೆಯ ಈ ದಿಕ್ಕಿನಲ್ಲಿ ನನಗೆ ಅಚ್ಚರಿಯೆನಿಸುತ್ತದೆ. ಹೆಣ್ಣೊಬ್ಬಳ ಸುತ್ತ ಸದಾ ಆಸ್ತಿಪಾಸ್ತಿ, ಸಂಪತ್ತಿನ ರಕ್ಷಣೆಯ ವಿಚಾರಗಳೇ ತಳುಕು ಹಾಕಿಕೊಂಡಿರುತ್ತವೆ. ಅಪ್ಪನ ಪಾಲಿಗೂ ಹೆತ್ತ ಮಗಳಿಗಿಂತ ಆಸ್ತಿಯೇ ಮುಖ್ಯವಾಗುತ್ತದೆ. ಅತ್ತೆಯ ಪಾಲಿಗೆ, ಗಂಡನ ಪಾಲಿಗೆ... ಹೀಗೆ. ಆಸ್ತಿಯೊಂದೇ ಬದುಕು ಎಂಬಂತೆ ಹೆಣ್ಣನ್ನು ನೋಡಲಾಗುತ್ತದೆ.

ಆದರೆ ಅವಳ ಅಂತರಂಗದಲ್ಲಿ ಜೀವಸೆಲೆ ಪುಟಿಯುತ್ತಿದೆ. ಪದೇ ಪದೇ ಸತ್ತು ಬದುಕುವ ಶಕ್ತಿವಂತೆ. ಆ ಅರಮನೆಯನ್ನು ದುಷ್ಟ ತಂದೆ ಪಡೆಯಲು ಮಾಡಿದ ಸಂಚನ್ನರಿತವಳು, ಅದನ್ನು ಉಳಿಸಿಕೊಳ್ಳಲಾದರೂ ತನ್ನದೇ ಮಗು ಬೇಕೇ ಬೇಕೆಂಬ ಹಟಕ್ಕೆ ಬೀಳುತ್ತಾಳೆ. ತನ್ನ ಬೆನ್ನು ಬಿದ್ದ ನಕ್ಷತ್ರಿಕ ಮರ್ಯಾನನ್ನೇ ಆರಿಸಿಕೊಳ್ಳುತ್ತಾಳೆ. ಪರುಷಮಣಿ ಮುಟ್ಟಿದವನಂತೆ ಆ ಮರ್ಯಾನೇನೋ ಥಟ್ಟನೇ ಅಪ್ಪಟ ಚಿನ್ನವಾಗಿ ಬದಲಾಗುತ್ತಾನೆ. ಆದರೆ ಅದೃಷ್ಟಹೀನೆ ಸಿಂಗಾರೆವ್ವನ ಬದುಕು ಬದಲಾದೀತೇ? ಬದಲಾಗಲು ವಿಧಿ ಬಿಟ್ಟೀತೇ?

ತಾನು ಅನ್ಯಪುರುಷನನ್ನು ಮುಟ್ಟಿದೆನೆಂಬ ನೈತಿಕತೆಯ ಕತ್ತಿ ಅವಳ ತಲೆಯ ಮೇಲೆ ತೂಗಾಡಿದಾಗೆಲ್ಲಾ ಉನ್ಮಾದಗೊಂಡು ಬಡಬಡಿಸುತ್ತಾಳೆ. ಯಾವುದೇ ರೀತಿಯಲ್ಲಿ ಗಂಡನಾಗಿರದಿದ್ದರೂ ದೇಸಾಯಿಗೆ ದ್ರೋಹ ಮಾಡಿದೆನೆಂದು ಹಲುಬುತ್ತಾ, ಸೆರೆ ಕುಡಿಯುತ್ತಾಳೆ. ಗೊತ್ತಿದ್ದೋ ಗೊತ್ತಿಲ್ಲದೆಯೋ ಮತ್ತೆ ಮತ್ತೆ ಮರ್ಯಾನ ಸಹವಾಸದ ಅಮಲಿನಲ್ಲಿ ತೇಲುತ್ತಾಳೆ. ಸಾವಿರ ಕಂಬಗಳಿರುವ, ಅವಳು ಉಳಿಸಿಕೊಳ್ಳಲು ಒದ್ದಾಡುತ್ತಿರುವ ಆ ಅರಮನೆಯೇ ಅವಳಿಗೊಂದು ಹುಣಿಸೆಯ ಮೆಳೆಯಾಗಿ ಗೋಚರಿಸುತ್ತದೆ. ಸರಿ-ತಪ್ಪು, ಆ ಅರಮನೆಯನ್ನು ಉಳಿಸಿಕೊಳ್ಳುವ ಪ್ರಯತ್ನ, ಮಗುವಿನ ಆಸೆ, ಹಾದರಗಿತ್ತಿ ಎಂದು ಆ ಅರಮನೆಯ ಹಿರಿಯರ ಆತ್ಮಗಳು ತನ್ನನ್ನು ನಿಂದಿಸುವವೆಂಬ ಭಯ, ಗಂಡನ ಷಂಡತನ... ಇವೆಲ್ಲದರ ಮಧ್ಯೆ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಕೂಸು! ಅಬ್ಬಾ! ಒಬ್ಬ ಗರ್ಭಿಣಿಗೆ ಸಿಗಬೇಕಾದ ಆರೈಕೆ ಸಿಗದೇ, ಗರ್ಭ ಉಳಿಸಿಕೊಳ್ಳಲು ಅವಳು ಪಡುವ ಪಾಡು ನೆನೆಸಿಕೊಂಡರೆ ಹೃದಯ ಬಿರಿಯುತ್ತದೆ.

ಅಲ್ಲಿವರೆಗೂ ಹೆಂಡತಿಯ ಗೊಡವೆಗೆ ಹೋಗದೇ ಇದ್ದ ಪತಿ, ಆಕೆ ಗರ್ಭಿಣಿ ಎಂದು ತಿಳಿದ ಕೂಡಲೇ ಮಾನ-ಮರ್ಯಾದೆಯ ಜಾಗೀರುದಾರ ತಾನೆಂಬಂತೆ ಆಡುತ್ತಾನೆ. ಹೊಟ್ಟೆಯುರಿ ತಡೆಯಲಾಗದೇ, ಆಕೆಯ ಹೊಟ್ಟೆಗೆ ತಲೆಯಿಂದ ಗುದ್ದಿ ಮಗುವನ್ನು ಕೊಲ್ಲಲು ಪ್ರಯತ್ನಿಸಿ, ಅದಾಗದೇ, ಕೊನೆಗೆ ತನ್ನ ಸಾವಿಗೇ ಇವಳೇ ಕಾರಣವೆಂದು, ಮರ್ಯಾದೆ ಇದ್ದರೆ ನೀನೇ ನನ್ನ ಕೊಂದೆ ಎಂದು ಒಪ್ಪಿಕೊಂಡು ಜೈಲುಪಾಲಾಗು ಎಂದು ಸೂಚಿಸಿ ಪತ್ರ ಬರೆದು ಗುಂಡು ಹೊಡೆದು ಆತ್ಮಹತ್ಯೆ ಮಾಡಿಕೊಂಡು ಸಾಯುತ್ತಾನೆ. ನೆಪಕ್ಕಾದರೂ ಇದ್ದ ಗಂಡನೊಬ್ಬ ಹೀಗೆ ಹತನಾದುದನ್ನು ಕಂಡು ಆ ಪರಿಸ್ಥಿತಿಯನ್ನು ಅರಗಿಸಿಕೊಳ್ಳುವುದು ಸುಲಭವಲ್ಲವಾದರೂ ಸಿಂಗಾರೆವ್ವ ಗಟ್ಟಿಗಿತ್ತಿ.

ಅವನ ಕೊನೆಯ ಪತ್ರವೋ ವ್ಯಂಗ್ಯದ ಆಗರ. ಸಾಧ್ವೀಮಣಿ, ಹಿಂದೂ ನಾರಿ, ಪತಿವ್ರತಾ ಶಿರೋಮಣಿ ಮುಂತಾದ ಪದಗಳು ಅವನ ದುರ್ಬಲ ಮನದ ಕ್ರೌರ್ಯವನ್ನಲ್ಲದೇ ಮತ್ತೇನನ್ನೂ ಸಾರುವುದಿಲ್ಲ. 'ತಾನು ಹೇಗಿದ್ದರೂ ಪರವಾಗಿಲ್ಲ, ಹೆಂಡತಿ ಮಾತ್ರ ಹೀಗೆಯೇ ಇರಬೇಕು' ಎಂಬ ಆಶಯವನ್ನು ಸಾರುವ ಈ ಪತ್ರವು, ಗಂಡುಕುಲದ ಆಶಯದ ಪ್ರತಿನಿಧಿಯೇ ಆಗಿದೆ.

ಆಕೆ ಸಾವಿನ ಬಾಗಿಲು ತಟ್ಟುವಷ್ಟು ತೀವ್ರವಾಗಿ ಜ್ವರ ಬಂದಾಗಲೂ ತಿರುಗಿ ನೋಡದ ಗಂಡನಿಗಾಗಿ, ಅವನ ಕಾಗದದ ಮೇಲಣ ಹುಚ್ಚು ಮಾತಿಗಾಗಿ, ಯಾರು ಹೇಳಿದರೂ ಕೇಳದೇ ತಾನಾಗಿ, ಮೂಕವಾಗಿ ಜೈಲು ಸೇರುವ ಸಿಂಗಾರೆವ್ವನ ಮೌನ ಯಾವಾಗಲೂ